ಅ) ಹಾಗಿದ್ದಲ್ಲಿ ಚುನಾವಣೆ ನಡೆಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು.

ಆ) ಚಿಕ್ಕನಾಯಕನಹಳ್ಳಿ ಹಾಗೂ ಹುಳಿಯಾರು ಮಾರುಕಟ್ಟೆ ಸಮಿತಿಯನ್ನು ಸಂಯೋಜನೆ ಮಾಡಿ ಸಂಯೋಜಿತ ಸಮಿತಿಗೆ ಸದಸ್ಯರನ್ನು ನಾಮಕರಣ ಮಾಡುವ ಪ್ರಸ್ತಾವವು ಸರ್ಕಾರದ ಪರಿಶೀಲನೆಯಲ್ಲಿರುವುದರಿಂದ ಈ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ ನಡೆಸುವ ಪ್ರಕ್ರಿಯೆಯಿಂದ ಹೊರತುಪಡಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕೆಲವು ಅಧಿಕಾರಿಗಳು ಪೊರ್ಜರಿ ದಾಖಲಾತಿಗಳನ್ನು ನೀಡಿ ಕಾರ್ಯ ನಿರ್ವಹಿಸುತ್ತಿರುವುದು

1665 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕೆಲವು ಅಧಿಕಾರಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪೋರ್ಜರಿ ದಾಖಲಾತಿಗಳನ್ನು ನೀಡಿ ಸರ್ಕಾರಿ ಕೆಲಸ ನಿರ್ವಹಿಸುತ್ತಿರುವುದರ ಬಗ್ಗೆ ಸಿ.ಆರ್.ಇ. ಸೆಲ್‌ನಿಂದ ವರದಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದರೆ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕಾನೂನು ಕ್ರಮವೇನು?

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವರು) :

1. ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಪೋರ್ಜರಿ ದಾಖಲಾತಿಗಳನ್ನು ನೀಡಿ ಸರ್ಕಾರಿ ಸೇವೆಗೆ ಸೇರಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆದರೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜಾತಿ ಬಗ್ಗೆ ಸುಳ್ಳು ದಾಖಲಾತಿಗಳನ್ನು ನೀಡಿ ರಾಜ್ಯ ಸರ್ಕಾರಿ ಸೇವೆಗೆ ಸೇರಿರುವ ಬಗ್ಗೆ ಸಿ.ಆರ್.ಇ. ಸೆಲ್‌ನಿಂದ ವರದಿಗಳು ಬಂದಿವೆ.

2. ಸಿ.ಆರ್.ಇ. ಸೆಲ್‌ನಿಂದ ಬಂದಿರುವ ವರದಿಗಳನ್ನು ಪರಿಶೀಲಿಸಲಾಗುತ್ತಿದೆ. ತಪ್ಪಿತಸ್ಥರೆಂದು ಕಂಡುಬರುವ ಅಧಿಕಾರಿ/ನೌಕರರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಮಂಗಳೂರು ಮರಕಡ ಬಡಾವಣೆಯಲ್ಲಿ ಗೃಹಮಂಡಳಿಯ ಮನೆಗಳು

1670 - ಶ್ರೀ ಕುಂಬೈ ಸುಂದರರಾವ್ (ಸುರತ್ಕಲ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮರಕಡ/ಬೊಂದೇಲ್‌ನಲ್ಲಿ ಗೃಹಮಂಡಳಿ ವತಿಯಿಂದ ಕಟ್ಟಿದ ಮನೆಗಳು ಎಷ್ಟು? ಅವುಗಳಲ್ಲಿವನ್ನು ಹಂಚಿಕೆ ಮಾಡಲಾಗಿದೆಯೆ?*

ಆ) *ಮನೆಗಳನ್ನು ಪಡೆದುಕೊಂಡವರು ಸರಕಾರಕ್ಕೆ ಪಾವತಿಸಬೇಕಾದ ಹಣವನ್ನು ಪಾವತಿಸಿದ್ದಾರೆಯೆ, ಇಲ್ಲವಾದಲ್ಲಿ ಬಾಕಿ ಇರುವ ಮೊಬಲಗು ಎಷ್ಟು, ಬಾಕಿ ವಸೂಲು ಮಾಡದೇ ಇರಲು ಕಾರಣಗಳೇನು?*

ಇ) *ಈ ಕುರಿತಾಗಿ ರಾಜ್ಯ ಹೈಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಹೊಸದಾಗಿ ಬಾಕಿ ವಸೂಲು ಮಾಡಲು ಗೃಹಮಂಡಳಿಗೆ ಇರುವ ತೊಂದರೆಗಳು ಏನು?*

ಈ) *ಸರಕಾರಕ್ಕೆ ಕೊಡಬೇಕಾದ ಬಾಕಿಯನ್ನು ಪಾವತಿ ಮಾಡಿ ಕ್ಲಿಯರೆನ್ಸ್ ಸರ್ಟಿಫಿಕೇಟನ್ನು ನೀಡಿ ಮನೆಗಳನ್ನು ರಿಜಿಸ್ಟರ್ ಮಾಡುವ ದೆಸೆಯಲ್ಲಿ ಸೂಕ್ತ ಕ್ರಮಗಳನ್ನು ಗೃಹ ಮಂಡಳಿಯು ಜರುಗಿಸುವುದೆ?*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಮಂಗಳೂರು ಮರಕಡ ಬಡಾವಣೆಯಲ್ಲಿ ಗೃಹಮಂಡಳಿಯು ಒಟ್ಟು 322 ವಿವಿಧ ವರ್ಗಗಳ ಮನೆಗಳನ್ನು ಕಟ್ಟಿ ಎಲ್ಲಾ ಮನೆಗಳನ್ನು ಹಂಚಿಕೆ ಮಾಡಲಾಗಿರುತ್ತೆ.

ಆ) ಒಟ್ಟು 322 ಹಂಚಿಕೆದಾರರ ಪೈಕಿ 129 ಮನೆಗಳ ಹಂಚಿಕೆದಾರರು ಮಂಡಳಿಗೆ ಪಾವತಿಸಬೇಕಾದ ಹಣವನ್ನು ಗುತ್ತಿಗೆ ಮಾರಾಟ ಪತ್ರದಲ್ಲಿ ಕಲಮುಗಳ ಪ್ರಕಾರ ಪಾವತಿಸಿರುತ್ತಾರೆ. ಬಾಕಿ ಇರುವ ಪ್ರಕರಣಗಳಲ್ಲಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗಿದೆ. ಉಳಿದ ಹಂಚಿಕೆದಾರರು ಪಾವತಿಸಬೇಕಾದ ಬಾಕಿ ಮೊತ್ತ ರೂ. 29.48 ಲಕ್ಷಗಳು.

ಇ) ರಿಟ್ ಮೇಲ್ಮನವಿಗಳನ್ನು ಇತ್ಯರ್ಥಪಡಿಸಿ ರಾಜ್ಯ ಹೈಕೋರ್ಟ್ ಗೃಹ ಮಂಡಳಿ ಪರವಾಗಿ ತೀರ್ಪು ನೀಡಿದ್ದು, ಬಾಕಿ ವಸೂಲು ಮಾಡಲು ಯಾವ ತೊಂದರೆಗಳು ಇರುವುದಿಲ್ಲ.

ಈ) ಗೃಹ ಮಂಡಳಿಗೆ ಕೊಡಬೇಕಾದ ಬಾಕಿಯನ್ನು ಪಾವತಿಸಿರುವ ಹಂಚಿಕೆದಾರರಿಗೆ ಕ್ಲಿಯರೆನ್ಸ್ ಸರ್ಟಿಫಿಕೇಟನ್ನು ನೀಡಿದ್ದು, ಒಟ್ಟು 129 ಮನೆಗಳ ಹಂಚಿಕೆದಾರರುಗಳು ಈಗಾಗಲೇ ಕ್ರಯ ಪತ್ರಗಳ ರಿಜಿಸ್ಟರ್ ಮಾಡಿಕೊಂಡಿರುತ್ತಾರೆ. ಉಳಿದ ಹಂಚಿಕೆದಾರರುಗಳು ಮಂಡಳಿಯ ಬಾಕಿಯನ್ನು ಪಾವತಿಸಿದ ತಕ್ಷಣವೇ ಕ್ರಯಪತ್ರ ನೀಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಮಂಗಳೂರು ಮಾರುಕಟ್ಟೆ ಸಮಿತಿಗಳು

1672 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರು ಮಾರುಕಟ್ಟೆ ಸಮಿತಿಯು ಕಳೆದ 3 ವರ್ಷಗಳಿಂದ ವಸೂಲು ಮಾಡಿದ ಮಾರುಕಟ್ಟೆ ಶುಲ್ಕ ಎಷ್ಟು? (ವರ್ಷವಾರು ವಿವರ ಒದಗಿಸುವುದು)*